<u>ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ</u>

ಓ ಎಸ್ ನಂ. **402/2019** ಪಿ .ಡಬ್ಲ್ಯೂ: **1**

<u>ದಿನಾಂಕ: **18.03.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು: ಪ್ರತಿವಾದಿ ಪರ ಶ್ರೀಮತಿ.ಪಿ.ಎಂ.ಪಿ ವಕೀಲರಿಂದ:</u>

ನನ್ನ ತಂದೆಯ ಹೆಸರು ಲಕ್ಷ್ಮೀನರಸಿಂಹಯ್ಯ. ಪ್ರಸ್ತುತ ದಾವೆಯನ್ನು ಸಲ್ಲಿಸಲು ಅಗತ್ಯವಿರುವ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನ್ನ ವಾದ ಪತ್ರದಲ್ಲಿ ನನ್ನ ತಂದೆಯ ಹೆಸರು ಲಕ್ಷ್ಮೀನರಸಯ್ಯ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಖಾತೆ ನಂ. 173/1. ನಾನು ನನ್ನ ವಾದ ಪತ್ರದಲ್ಲಿ ದಾವಾ ಸ್ವತ್ತು ನನಗೆ ಹೇಗೆ ಬಂತು ಎಂದು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು, ದಾವಾ ಸ್ವತ್ತನ್ನು ನನ್ನ ತಂದೆ ಕ್ರಯಪತ್ರದ ಮುಖಾಂತರ ಪಡೆದುಕೊಂಡಿದ್ದು ಅವರಿಂದ ನನ್ನ ಹೆಸರಿಗೆ ಬಂದಿರುತ್ತದೆ ಎನ್ನುತ್ತಾರೆ. ನನ್ನ ತಾತನ ಹೆಸರು ತಿರುಮಲಯ್ಯ ಎಂದರೆ ಸರಿ. ಪ್ರಸ್ತುತ ದಾವೆಯ ದಾವಾ ಸ್ವತ್ತನ್ನು ತಿರುಮಲಯ್ಯ ರವರ ಮಗ ಲಕ್ಷ್ಮೀನರಸಿಂಹಯ್ಯ ರವರು ದಿ: 10.11.1955 ರಂದು ಕ್ರಯಪತ್ರದ ಮುಖಾಂತರ ಲಿಂಗಾನಂದಸ್ವಾಮಿ ಎನ್ನುವವರಿಂದ ಖರೀದಿಸಿದ್ದರು ಎಂದರೆ ಸರಿ . ಸದರಿ ಕ್ರಯಪತ್ರದ ಮುಖಾಂತರ ಲಕ್ಷ್ಮೀನರಸಿಂಹಯ್ಯ ರವರು ಖರೀದಿಸಿರುವ ಜಾಗದ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರದ ಮುಖಾಂತರ ಲಕ್ಷ್ಮೀನರಸಿಂಹಯ್ಯ ರವರು ಖಾತೆ ನಂ.173 ರಲ್ಲಿ ಖಾಲಿ ನಿವೇಶನವನ್ನು ಖರೀದಿಸಿದ್ದರು ಎಂದರೆ ಸರಿ. ಸದರಿ ನಿವೇಶನದ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಸಿದ್ದಲಿಂಗಪ್ಪ ರವರ ಖಾಲಿ ನಿವೇಶನ, ಉತ್ತರಕ್ಕೆ ಸರ್ಕಾರಿ ಜಾಗ ಮತ್ತು ದಕ್ಷಿಣಕ್ಕೆ ಸರ್ಕಾರಿ ಶಾಲೆ ಯ ಜಾಗ ಎಂದರೆ ಸರಿ. ಮೇಲ್ಕಂಡ ಚಕ್ಕುಬಂದಿಯ ಮಧ್ಯೆ ಇರುವ ಪೂರ್ವ ಪಶ್ಚಿಮ 20 ಗಜ, ಉತ್ತರ ದಕ್ಷಿಣ 11 ಗಜ ವಿಸ್ತೀರ್ಣ ಉಳ್ಳ ಖಾಲಿ ನಿವೇಶನವನ್ನು ದಿ: 10.11.1955 ರ ಕ್ರಯಪತ್ರದ ಮುಖಾಂತರ ನನ್ನ ತಂದೆ

ಖರೀದಿಸಿದ್ದರು ಎಂದರೆ ಸರಿ. ನನ್ನ ತಂದೆ ಸದರಿ ಜಾಗವನ್ನು ಖರೀದಿಸಿದಾಗ ಅದು ಖಾಲಿ ನಿವೇಶನವಾಗಿತ್ತು ಎಂದರೆ ಸರಿ. ಸದರಿ ಖಾಲಿ ನಿವೇಶನದಲ್ಲಿ ಯಾವುದೇ ಮನೆ ನಿರ್ಮಿಸಿರುವುದಿಲ್ಲ , ಅದು ಈಗಲೂ ಸಹ ಖಾಲಿ ನಿವೇಶನವಾಗಿ ಉಳಿದಿದೆ. ಸದರಿ ದಿಃ 10.11.1955 ರ ಕ್ರಯಪತ್ರದ ಮುಖಾಂತರ ಖರೀದಿಸಿರುವ ಖಾಲಿ ನಿವೇಶನದಲ್ಲಿ ಮನೆಯನ್ನು ನಿರ್ಮಿಸಿ ವಾಸವಿರುತ್ತೇವೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು, 1960 ರಲ್ಲಿ ಖರೀದಿಸಿದ ಖಾಲಿ ನಿವೇಶನದಲ್ಲಿ ಮನೆ ನಿರ್ಮಿಸಿ ಅದರಲ್ಲಿ ವಾಸವಿರುತ್ತೇವೆ ಎನ್ನುತ್ತಾರೆ.

1960 ರಲ್ಲಿ ಖರೀದಿಸಲಾಗಿದೆ ಎಂದು ಹೇಳಿರುವ ಖಾಲಿ ನಿವೇಶನಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿರುತ್ತೇನೆ. 1960 ರಲ್ಲಿ ಖರೀದಿಸಲಾಗಿದೆ ಎಂದು ಹೇಳಿರುವ ಖಾಲಿ ನಿವೇಶನಕ್ಕೆ ಸಂಬಂಧಿಸಿದಂತೆ ಮನೆ ಕಟ್ಟುವ ಲೈಸೆನ್ಸ್ ಮತ್ತು ಖಾತೆಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಖಾಲಿ ನಿವೇಶನದಲ್ಲಿ ನಾವು ನಿರ್ಮಿಸಿರುವ ಮನೆ ಪೂರ್ವ ಪಶ್ಚಿಮ 70 ಅಡಿ ಮತ್ತು ಉತ್ತರ ದಕ್ಷಿಣ 87 ಅಡಿ ವಿಸ್ತೀರ್ಣ ಇರುತ್ತದೆ , ಅದಕ್ಕೆ ಲೈಸೆನ್ಸ್ ನ್ನು ಸಹ ಪಡೆದಿರುತ್ತೇವೆ. 1960 ರಲ್ಲಿ ಖರೀದಿಸಲಾಗಿದೆ ಎಂದು ಹೇಳಿರುವ ಖಾಲಿ ನಿವೇಶನದ ಕ್ರಯಪತ್ರವನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಗಳೊಂದಿಗೆ ಸಲ್ಲಿಸಿರುವುದಿಲ್ಲ. 1960 ರ ಕ್ರಯ ಪತ್ರದ ಮುಖಾಂತರ ಖರೀದಿಸಲಾಗಿದೆ ಎಂದು ಹೇಳಿದ ನಿವೇಶನದ ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

( ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ . ಹೇ. ಕೇ. ಸರಿ. ಇದೆ

**sd/-**
ಅಧಿಕ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ , ಗುಬ್ಬಿ.